**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 188/2018

ಪಿ.ಡಬ್ಲ್ಯೂ : 1 ಸಿ.ಡಬ್ಲ್ಯೂ 1

<u>ಸಾಕ್ಷಿಗೆ ಇಂದು ದಿನಾಂಕಃ 05.12.2025 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಂದುವರೆದ ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

**ಕಳೆದ ಬಾರಿ ದಿನಾಂಕ 25-08-22 ರಂದು ಸಾಕ್ಷಿಯ ಮುಖ್ಯ ವಿಚಾರಣೆ ದಾಖಲಿಸಿಕೊಂಡಿದ್ದು ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರ ಹಾಜರು ಮಾಡದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದುಡಲಾಗಿದ್ದು ದಿ 02-09-22 ರಂದು ಅಭಿಯೋಜನೆಯವರು ಕಲಂ 91 ಸಿಆರ್ ಪಿಸಿ ಅರ್ಜಿ ಹಾಕಿದ್ದು ತನಿಖಾಧಿಕಾರಿಗೆ ನೋಟಿಸ್ ನೀಡಿದ್ದು ದಿ 12-01-23 ರಂದು ತಮ್ಮ ವರದಿ ಸಲ್ಲಿಸಿದ್ದು ಅದರಂತೆ ಪಂಚನಾಮೆ ಕಾಲಕ್ಕೆ ಫೋಟೊ ತೆಗೆದಿದ್ದು ಅದನ್ನು ದೋಷಾರೋಪಣೆ ಪಟ್ಟಿಯೊಂದಿಗೆ ಸಲ್ಲಿಸಿರುವುದಿಲ್ಲ ಎಂದು ವರದಿ ನೀಡಿದ್ದು ಯಾವುದೇ ಫೋಟೊಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆ ಕಾರಣಕ್ಕಾಗಿ ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪಂಚನಾಮೆಕ್ಕೆ ಕಾಲಕ್ಕೆ ತೆಗೆದಿರುವ ಫೋಟೊವನ್ನು ಸಾಕ್ಷಿಗೆ ತೋರಿಸಲು ಆಗಿರುವುದಿಲ್ಲ.**

ಸ್ಥಳ ಪಂಚನಾಮೆ ನಂತರ ಪೋಲಿಸ್ ಠಾಣೆಗೆ ಹೋಗಿದ್ದು ಅಲ್ಲಿ ವಾಹನವಿದ್ದು ನನ್ನ ಸಮಕ್ಷಮ ಅದರ ಫೋಟೊವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಪಂಚನಾಮೆ ಕಾಲಕ್ಕೆ ತೆಗೆದ ಫೋಟೊವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಜಪ್ತಿ ಪಂಚನಾಮೆ ಮೇಲೆ ಇರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ನಿಪಿ 3 ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸದರಿ ವಾಹನ ಸಂಖ್ಯೆ ಹೇಳಲು

ಬರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ದಿನಾಂಕ 08-12-2017 ರಂದು ನನ್ನನ್ನು ನಿಪಿ 3 ರಲ್ಲಿ ನಮೂದು ಮಾಡಿದಂತೆ ಠಾಣೆಗೆ ಕರೆದುಕೊಂಡು ಹೋಗಿ ನನ್ನ ಸಮಕ್ಷಮ ದ್ವಿ ಚಕ್ರ ವಾಹನ ನಂಬರ ಕೆಎ/28/ಟಿಸಿ/0026 ವಾಹನವನ್ನು ಸಾಯಂಕಾಲ 4.45 ರಿಂದ 5.30 ರವರೆಗೆ ಜಪ್ತಿ ಮಾಡಿಕೊಂಡು ಸಹಿ ಪಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಃ**

**ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.